ಮೂಲ ದಾವಾ ಸಂಖ್ಯೆ. 25/2019 ಪಿ ಡಬ್ಲ್ಯೂ 1

(ದಿನಾಂಕ 12-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಹೆಚ್ ಎಂ ವಕೀಲರಿಂದಃ-

ನಮ್ಮ ತಂದೆ ತಾಯಿಗೆ ನಾವು ಇಬ್ಬರು ಮಕ್ಕಳು. ನನ್ನ ಸಹೋದರಿಯ ಹೆಸರು ಶಾಂತಮ್ಮ. ನಾನು ಮತ್ತು ಶಾಂತಮ್ಮ ದಾವಾ ಜಮೀನುಗಳ ಕುರಿತು ಪಾಲುವಿಭಾಗ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ಪಾಲುವಿಭಾಗದಲ್ಲಿ ದಾವಾ ಐಟಂ ನಂ.9 ರಲ್ಲಿ ನನಗೆ 2.13 ಎಕರೆ ಜಮೀನು ಬಂದಿರುತ್ತದೆಂದರೆ ಸುಳ್ಳು. ಸದರಿ ದಾವಾ ಐಟಂ ನಂ.9 ರಲ್ಲಿ ನಿಮ್ಮ ಹೆಸರು ಯಾವ ಆಧಾರದಲ್ಲಿ ದಾಖಲಾಗಿದೆ ಎಂದರೆ ಸಾಕ್ಷಿಯು ನನ್ನ ತಂದೆ ಹೆಸರಿಗೆ ಬಂದ ಪಾಲು ನನ್ನ ಹೆಸರಿಗೆ ದಾಖಲಾಗಿದೆ ಎನ್ನುತ್ತಾರೆ. ಸರ್ವೆ ನಂ.126 ಇದು ಒಟ್ಟು 5 ಎಕರೆ ಇರುತ್ತದೆ. ಸದರಿ ಐಟಂ ನಂ.9 ಇದು ಮೂಲತಃ ನನ್ನ ಅಜ್ಜಿ ನಾಗಮ್ಮ ಇವರಿಗೆ ಸೇರಿದ್ದು ಇರುತ್ತದೆ. ನಾನು ಚಿಕ್ಕ ವಯಸ್ಸಿನಲ್ಲಿದ್ದಾಗ ನನ್ನ ಅಜ್ಜಿ ನಾಗಮ್ಮ ಇವರು ತೀರಿಕೊಂಡಿದ್ದಾರೆ. ನಮ್ಮ ಅಜ್ಜಿ ತೀರಿದ ನಂತರ ನಾನು, ಬಸಮ್ಮ, ಶಾಂತಮ್ಮ ಮತ್ತು ಗೂಳೆಪ್ಪ ಸೇರಿ ಪಾಲುವಿಭಾಗ ಮಾಡಿಕೊಂಡಿರುತ್ತೇವೆಂದರೆ ಸರಿ. ಸದರಿ ಪಾಲುವಿಭಾಗದಲ್ಲಿ ಸರ್ವೆ ನಂ.126 ಎ ದಲ್ಲಿ 2.13 ಎಕರೆ ಜಮೀನು ಶಾಂತಮ್ಮ ಇವರ ಹೆಸರಿಗೆ ಬಂದಿದೆ ಎಂದರೆ ಸರಿಯಲ್ಲ ಸಾಕ್ಷಿಯು ಅದನ್ನು ನಾನೇ ಮಾಡುತ್ತೇನೆನ್ನುತ್ತಾರೆ. ಸರ್ವೆ ನಂ.126 ಎ ಜಮೀನಿನ ಒಟ್ಟು ವಿಸ್ತೀರ್ಣ 7.10 ಎಕರೆ ಇದೆ ಎಂದರೆ ಸರಿ. ಸದರಿ 7.10 ಎಕರೆ ಜಮೀನಿನಲ್ಲಿ 2.13 ಎಕರೆ ಜಮೀನು ಶಾಂತಮ್ಮ ಇವರದು, 2.13 ಎಕರೆ ಜಮೀನು ನನ್ನದು, 2.37 ಎಕರೆ ಜಮೀನು 3 ನೇ ಪ್ರತಿವಾದಿಗೆ ಸೇರಿರುತ್ತದೆಂದರೆ ಸುಳ್ಳು. ಸದರಿ 2.37 ಎಕರೆ ಜಮೀನಿನ ಮೇಲೆ 3 ನೇ ಪ್ರತಿವಾದಿ ವೀರೇಶ್ ಇವರು ಬ್ಯಾಂಕಿನಲ್ಲಿ 2010 ರಿಂದ ಇಲ್ಲಿಯವರೆಗೆ ಸಾಲವನ್ನು ಪಡೆಯುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ ಸಾಕ್ಷಿಯು ಆ ಜಮೀನು ನನ್ನದು ಎನ್ನುತ್ತಾರೆ.

3 ನೇ ಪ್ರತಿವಾದಿಯ ಭಾಗಕ್ಕೆ ಬಂದ ಎಷ್ಟು ಆಸ್ತಿಗಳ ಕುರಿತು ನೀವು ದಾವೆ ದಾಖಲಿಸಿದ್ದೀರಿ ಎಂದರೆ ಸಾಕ್ಷಿಯು ನಾವು ಚಿಕ್ಕವರಿದ್ದಾಗ ಭಾಗ ಮಾಡಿಕೊಂಡಿದ್ದಾರೆ ಈಗ ನಮ್ಮ ತಂದೆಯ ಭಾಗಕ್ಕೆ ಬಂದ ಆಸ್ತಿಗಳ ಕುರಿತು ದಾವೆ ದಾಖಲಿಸಿದ್ದೇವೆನ್ನುತ್ತಾರೆ, ಸದರಿ ವಿಭಾಗವನ್ನು ರುದ್ರಗೌಡ, ಗೂಳೆಪ್ಪ ಮತ್ತು ವೀರನಗೌಡ ಮಾಡಿಕೊಂಡಿರುತ್ತಾರೆ. ಮೂರು ಜನಕ್ಕೂ ತಲಾ 18 ಎಕರೆ ಜಮೀನು ಬಂದಿರುತ್ತದೆ. ಸರ್ವೆ ನಂ.439 ಡಿ, 2.12 ಎಕರೆ ಜಮೀನಿನಲ್ಲಿ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಮತ್ತು ನನ್ನ ಚಿಕ್ಕಪ್ಪ ತಲಾ 72 ಸೆಂಟ್ಸನಂತೆ ಜಮೀನು ಹಂಚಿಕೆ ಮಾಡಿಕೊಂಡಿರುತ್ತಾರೆಂದರೆ ಸುಳ್ಳು.

ಮೂಲ ದಾವಾ ಸಂಖ್ಯೆ. 25/2019 ಪಿ ಡಬ್ಲ್ಯೂ 1

ಈ ದಾವೆ ದಾಖಲಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಸಿರುವ ವಿಚಾರ ನಾನೇ ಹೇಳಿ ಬರೆಸಿದ್ದೇನೆ. ಈಗಾಗಲೇ ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ವಿಭಾಗವಾಗಿದ್ದರೂ ಸಹಾ 3ನೇ ಪ್ರತಿವಾದಿಗೆ ತೊಂದರೆ ಕೊಡಲು ಈ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. 3ನೇ ಪ್ರತಿವಾದಿ ಈ ದಾವೆಗೆ ಅವಶ್ಯಕ ಪಕ್ಷಕಾರನಾಗಿರುವುದಿಲ್ಲ ನಾನು ನನ್ನ ಸಹೋದರಿಯಾದ ಶಾಂತಮ್ಮ ಇವರ ಮೇಲೆ ಮಾತ್ರ ದಾವೆ ದಾಖಲಿಸಬೇಕಾಗಿತ್ತು ಆದರೆ 3ನೇ ಪ್ರತಿವಾದಿಗೆ ತೊಂದರೆ ಕೊಡಲು ಈ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಗೂಳೆಪ್ಪ ಇವರಿಗೆ 5 ಜನ ಮಕ್ಕಳು ಅವರೆಂದರೆ 3ನೇ ಪ್ರತಿವಾದಿಯನ್ನು ಹೊರತುಪಡಿಸಿ ಉಳಿದವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲವೆಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ